## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರ ಒದಗಿಸುವ ಬಗ್ಗೆ.

**ಪ್ರಶ್ನೆ:** ಸೈಬರ್ ಅಪರಾಧ ಪ್ರಕರಣಗಳು ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದ್ದು, ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚು-ಹೆಚ್ಚು ನಡೆಯುತ್ತಿದೆ. ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಬೆದರಿಸಿ ವೃದ್ಧರೊಬ್ಬರಿಂದ ಲಕ್ಷಾಂತರ ರೂಪಾಯಿ ದೋಚಲಾಗಿದೆ. ವೈಟ್‌ಫೀಲ್ಡ್ ನಲ್ಲಿರುವ ಅಪಾರ್ಟ್ ಮೆಂಟನಲ್ಲಿ ವೃದ್ಧರೊಬ್ಬರು ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದಾರೆ. ಸದರಿ ವೃದ್ಧರಿಗೆ ಕರೆ ಮಾಡಿದ್ದ ವಂಚಕ ಮುಂಬಯಿ ಪೊಲೀಸ್ ಎಂಬುದಾಗಿ ಹೇಳಿಕೊಂಡು ನಿಮ್ಮ ಖಾತೆಯಿಂದ ಭಯೋತ್ಪಾದನೆ ಸಂಘಟನೆಗಳಿಗೆ ಹಣ ಸಂದಾಯ ಆಗುತ್ತಿದ್ದು ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿ ಖಾತೆಯಲ್ಲಿರುವ ಎಲ್ಲಾ ಹಣವನ್ನು ವರ್ಗಾಯಿಸಬೇಕು ಇಲ್ಲದಿದ್ದಾರೆ ಡಿಜಿಟಲ್ ಅರೆಸ್ಟ್ ಮಾಡುವುದಾಗಿ ಬೆದರಿಸಿ ವೃದ್ಧರ 2 ಬ್ಯಾಂಕ್ ಖಾತೆಗಳಿಂದ ಆನ್‌ಲೈನ್ ಮುಖಾಂತರ 16.60 ಲಕ್ಷ ರೂ. ವರ್ಗಾಯಿಸಿಕೊಂಡಿದ್ದಾರೆ.

ಗೃಹ ಇಲಾಖೆಯ ಅಂಕಿ ಅಂಶದಲ್ಲಿ ಇರುವಂತೆ ಸೈಬರ್ ವಂಚನೆ ಮತ್ತು ಡಿಜಿಟಲ್ ಅರೆಸ್ಟ್ ವಂಚನೆಯ ಕರಾಳ ಮುಖವನ್ನು ಗಮನಿಸಿದಾಗ 2023, 2024 2025 ರಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ = 59,626. ವಂಚನೆಯ ಮೊತ್ತ 81,708,744,878 (ಎಂಟು ಸಾವಿರದ ನೂರ ಎಪ್ಪತ್ತು ಕೋಟಿಯ ಎಂಬತ್ತೇಳು ಲಕ್ಷದ ನಲುವತ್ತ ನಾಲ್ಕು ಸಾವಿರದ ಎಂಟು ನೂರ ಎಪ್ಪತ್ತೆಂಟು ರೂಪಾಯಿ), 2023, 2024, 2025 ರಲ್ಲಿ ದಾಖಲಾದ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಸಂಖ್ಯೆ =1655. ವಂಚನೆಯ ಮೊತ್ತ = 3,727,711,003 (ಮುನ್ನೂರ ಎಪ್ಪತ್ತೇರಡು ಕೋಟಿ ಎಪ್ಪತ್ತೇಳು ಲಕ್ಷ ಹನ್ನೊಂದು ಸಾವಿರದ ಮೂರು ರೂಪಾಯಿ)

ಆದ್ದರಿಂದ, ರಾಜ್ಯದಾದ್ಯಂತ ನಡೆಯುತ್ತಿರುವ ಇಂತಹ ಆರ್ಥಿಕ ವಂಚನೆಯ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೈಬರ್ ಅಪರಾಧ ಠಾಣೆಗಳಲ್ಲಿ Information Technology Act-2000 IPC/BNS ಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆಗೊಳಿಸಿ ಸಂತ್ರಸ್ತರಿಗೆ ಆದಷ್ಟು ಶೀಘ್ರದಲ್ಲಿ ನ್ಯಾಯ ಒದಗಿಸಲು ಸದರಿ ಠಾಣೆಗಳಿಗೆ ಅಗತ್ಯ ಸಿಬ್ಬಂದಿಯನ್ನು ಒದಗಿಸಲು ಕ್ರಮ ವಹಿಸಿ ಆನ್‌ಲೈನ್ ವಂಚನೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವ ಕುರಿತು.

**ಉತ್ತರ:** ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ವೈಟ್‌ಫೀಲ್ಡ್‌ನಲ್ಲಿರುವ ಅಪಾರ್ಟ್‌ಮೆಂಟನಲ್ಲಿ ವೃದ್ಧರೊಬ್ಬರು ಲಕ್ಷಾಂತರ ರೂಪಾಯಿ ಕಳೆದುಕೊಂಡಿರುವ ಕುರಿತು ಸೈಬರ್ ಕ್ರೈಂ ಪೊಲೀಸ್ ಠಾಣೆ ವೈಟ್‌ಫೀಲ್ಡ್ ವಿಭಾಗದಲ್ಲಿ ಮೊ. ಸಂ :107/2025 ಕಲಂ 66(ಸಿ), (ಡಿ) ಐಟಿ ಆಕ್ಟ್, 318(4), 319(2) ಬಿ.ಎನ್.ಎಸ್-2023 ರೀತ್ಯಾ ಪ್ರಕರಣ ದಾಖಲಾಗಿದ್ದು, ಪ್ರಕರಣದ ವಿವರ ಈ ಕೆಳಕಂಡಂತಿರುತ್ತದೆ:-

1. ಪಿರ್ಯಾದುದಾರರಾದ ಶ್ರೀ ಶಶಿಧರನ್ ಐಯ್ಯಂಗಾರ್ ರವರು ದಿನಾಂಕ: 23.02.2026 ರಂದು ಸೈಬರ್ ಕ್ರೈಂ ಪೊಲೀಸ್ ಠಾಣೆ ವೈಟ್‌ಫೀಲ್ಡ್ ವಿಭಾಗದ ಠಾಣೆಗೆ ಹಾಜರಾಗಿ 16,60,094/- ರೂಗಳನ್ನು ಆನ್‌ಲೈನ್ ಮೂಲಕ ಮೋಸ ಮಾಡಿರುತ್ತಾರೆಂದು ನೀಡಿದ ದೂರನ್ನು ಪಡೆದು ಠಾಣಾ ಮೊ.ಸಂ:107/2026 ಕಲಂ66(ಸಿ) (ಡಿ) ಐಟಿ ಆಕ್ಟ್, 318(4), 319(2) ಬಿಎಸ್‌ಎಸ್ ರೀತ್ಯಾ ಪ್ರಕರಣ ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿರುತ್ತದೆ.
2. ಪ್ರಕರಣದಲ್ಲಿ ಮೋಸ ಮಾಡಿರುವ ಆರೋಪಿಗಳು ಪಿರ್ಯಾದುದಾರರನ್ನು ವಾಟ್ಸ್ ಆಪ್ ನಂ.+919199843613, +919804900341 ಗಳ ಮೂಲಕ ಸಂಪರ್ಕಿಸಿದ್ದು, ಸದರಿ ವಾಟ್ಸ್ ಆಪ್

ನಂಬರ್‌ಗಳ ಮಾಹಿತಿಯನ್ನು ನೀಡುವಂತೆ ವಾಟ್ಸ್ ಆಪ್ ಪೋರ್ಟಲ್‌ನಲ್ಲಿ META ರವರಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ.

3. ಪಿರ್ಯಾದುದಾರರು ಬ್ಯಾಂಕ್ ಖಾತೆಯಾದ 1) ಎಸ್.ಬಿ.ಐ. ಬ್ಯಾಂಕ್ ಅಕೌಂಟ್ ನಂ:40715712634 ರಿಂದ ಆರೋಪಿಗಳ ಬ್ಯಾಂಕ್ ಖಾತೆಗಳಾದ 1) IDFC FIRST BANK A/C NO:10267885382 & 2) UTKARSH SMALL FINANCE BANK A/C NO:1674017850871057 ಗಳಿಗೆ ಹಣವನ್ನು ವರ್ಗಾವಣೆ ಮಾಡಿದ್ದು, ಸದರಿ ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟ್ ಮತ್ತು ಕೆ.ವೈ.ಸಿ. ಗಳ ಮಾಹಿತಿಯನ್ನು ನೀಡುವಂತೆ ಸಂಬಂಧಪಟ್ಟ ನೋಡಲ್ ಮತ್ತು ಬ್ಯಾಂಕ್ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ.

4. ಆರೋಪಿಗಳ ಬ್ಯಾಂಕ್ ಖಾತೆಗಳಾದ 1) IDFC FIRST BANK A/C NO:10267885382 & 2) UTKARSH SMALL FINANCE BANK A/C NO:1674017850871057 ಗಳ ಮಾಹಿತಿ ಬಂದಿದ್ದು, ಪರಿಶೀಲಿಸಲಾಗಿ 1) IDFC FIRST BANK A/C NO:10267885382 ರಲ್ಲಿ ಬ್ಯಾಲೇನ್ಸ್ 2/- ರೂಗಳು ಇರುತ್ತದೆ. ಸದರಿ ಖಾತೆಯು Chunram, Rudrakhasi Nilayam No.35, Machohalli, Bengaluru-560091 2) UTKARSH SMALL FINANCE BANK A/C NO:1674017850871057 ರಲ್ಲಿ ಬ್ಯಾಲೇನ್ಸ್ 5491/- ರೂಗಳು ಇರುತ್ತದೆ. ಸದರಿ ಖಾತೆಯು Kanha Mewada, Hanuman Basthi, Dadabari Kota, Rajasthan-324009 ವಿಳಾಸ ಆಗಿರುತ್ತದೆ.

5. ಆರೋಪಿಗಳ ಖಾತೆಯಲ್ಲಿರುವ ವಿಳಾಸಕ್ಕೆ ಕಲಂ 35(3) ಬಿ.ಎನ್.ಎಸ್.ಎಸ್-2023 ಅಡಿಯಲ್ಲಿ ರಾಜಸ್ಥಾನ ವಿಳಾಸಕ್ಕೆ ಅಂಚೆ ಮೂಲಕ ನೋಟಿಸ್ ಕಳುಹಿಸಿರುತ್ತದೆ ಹಾಗೂ ಬೆಂಗಳೂರು ವಿಳಾಸಕ್ಕೆ ಹೆಚ್.ಸಿ.8709 ರವರನ್ನು ಕಳುಹಿಸಿಕೊಟ್ಟಿರುತ್ತದೆ. ಆರೋಪಿಯ ವಿಳಾಸವು ಪತ್ತೆಯಾಗಿರುವುದಿಲ್ಲವೆಂದು ಸಿಬ್ಬಂದಿಯವರು ವರದಿ ಮಾಡಿರುತ್ತಾರೆ.

6. ಪ್ರಾಥಮಿಕ ಆರೋಪಿಗಳ ಬ್ಯಾಂಕ್ ಖಾತೆಯಲ್ಲಿ ಬ್ಯಾಲೆನ್ಸ್ ಇಲ್ಲದ ಕಾರಣ ದ್ವಿತೀಯ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ನೀಡುವಂತೆ IDFC FIRST BANK ಮತ್ತು UTKARSH SMALL FINANCE BANK ಬ್ಯಾಂಕ್‌ಗಳಿಗೆ ಇ-ಮೇಲ್ ಮೂಲಕ ಮನವಿಯನ್ನು ಸಲ್ಲಿಸಿರುತ್ತದೆ.

7. ಪ್ರಾಥಮಿಕ ಆರೋಪಿಯ ಬ್ಯಾಂಕ್ ಖಾತೆಯಾದ IDFC FIRST BANK ಗೆ ಒಟ್ಟು 6,60,000/- ರೂಗಳು ವರ್ಗಾವಣೆಯಾಗಿದ್ದು, ಎಲ್ಲಾ ಹಣವನ್ನು ಎಟಿಎಂ ಮೂಲಕ ವಿತ್ ಡ್ರಾ ಮಾಡಿಕೊಂಡಿರುತ್ತಾರೆ. ಸದರಿ ಎಟಿಎಂಗಳ ಸಿಸಿಟಿ ಫುಟೇಜ್‌ಗಳನ್ನು ನೀಡುವಂತೆ ಸಂಬಂಧಪಟ್ಟ ಬ್ಯಾಂಕ್ ಖಾತೆಗಳಿಗೆ ಮನವಿಯನ್ನು ಸಲ್ಲಿಸಲಾಗಿರುತ್ತದೆ.

8. ಕೃತ್ಯಕ್ಕೆ ಬಳಿಸಿರುವ ಆರೋಪಿಗಳ ವಾಟ್ಸ್ ಆಪ್ ನಂ.+919199843613, +919804900341 ಗಳ ಮಾಹಿತಿ ಬರಬೇಕಾಗಿರುತ್ತದೆ. ಆರೋಪಿಗಳು ಹಣವನ್ನು ವರ್ಗಾವಣೆ ಮಾಡಿರುವ ದ್ವಿತೀಯ ಬ್ಯಾಂಕ್ ಖಾತೆಗಳ ಮಾಹಿತಿಯನ್ನು ಪಡೆದು ತನಿಖೆ ಕೈಗೊಳ್ಳಬೇಕಾಗಿರುತ್ತದೆ. ಆರೋಪಿಗಳು ಹಣವನ್ನು ವಿತ್ ಡ್ರಾ ಮಾಡಿರುವ ಎಟಿಎಂಗಳ ಸಿಸಿ ಟಿವಿ ಫುಟೇಜ್‌ಅನ್ನು ನೀಡುವಂತೆ ಮನವಿಯನ್ನು ಸಲ್ಲಿಸಿದ್ದು, ಪ್ರಕರಣವು ತನಿಖಾ ಹಂತದಲ್ಲಿರುತ್ತದೆ. ಆರೋಪಿಗಳ ಪತ್ತೆ ಕಾರ್ಯ ಮುಂದುವರೆದಿರುತ್ತದೆ.

ರಾಜ್ಯದಲ್ಲಿ ಇಂಟರ್‌ನೆಟ್ ಮೊಬೈಲ್ ಫೋನ್ ಆನ್‌ಲೈನ್ ಮೂಲಕ ವಂಚನೆಗೊಳಗಾಗುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಲ್ಲದೇ ಪ್ರತಿ ದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು **ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/177/ಪಿಟಿಪಿ/2024, ದಿನಾಂಕ:01/08/2025** ರಲ್ಲಿ ರಾಜ್ಯದ 45 CEN ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳೆಂದು (**Cyber Crime Police Station**) ಮರುಪದನಾಮೀಕರಿಸಿ ಆದೇಶಿಸಿದೆ. ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿ **Information Technology Act -2000 & IPC/BNS** ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲು ಹಾಗೂ ತನಿಖೆ ಕೈಗೊಳ್ಳಲು ಅಧಿಕಾರ ನೀಡಿ, ವ್ಯಾಪ್ತಿ ನಿಗಧಿಪಡಿಸಿ ಅಧಿಸೂಚಿಸಲಾಗಿದೆ.

1. ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೋಲಿಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.
2. ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.
3. ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಛೇರಿ ಆಗಿದ್ದು, ಇತರೆ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.
4. ಡಿಜಿಟಲ್ ಅರೆಸ್ಟ್ ಸೈಬರ್ ಅಪರಾಧಗಳಿಗೆ ಸಂಬಂದಿಸಿದಂತೆ ಕೇಂದ್ರ ಸರ್ಕಾರದಿಂದ ಗೃಹ ಸಚಿವಾಲಯದ ಎನ್.ಸಿ.ಆರ್.ಪಿ (National Cyber Crime Reporting Portal) ನಲ್ಲಿ ದೂರುಗಳನ್ನು ದಾಖಲಿಸಲು ಸಾರ್ವಜನಿಕರಿಗೆ ಅವಕಾಶವಿದ್ದು, ದೂರುಗಳನ್ನು ದಾಖಲಿಸಿದ ನಂತರ ಈ ಪೋರ್ಟಲ್ ಮುಖಾಂತರ ಮಾಹಿತಿ ಪಡೆದುಕೊಂಡು ತನಿಖೆಯನ್ನು ಕೈಗೊಳ್ಳಲಾಗುತ್ತದೆ.
5. ಡಿಜಿಟಲ್ ಮತ್ತು ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನ್ಯಾಯಾಲಯವನ್ನು ಸೃಜನೆ ಮಾಡಲಾಗಿರುತ್ತದೆ.
6. ಪ್ರತಿ ಸೈಬರ್ ಠಾಣೆಯಲ್ಲಿ ಸೈಬರ್ ಕ್ರೈಂಗೆ ಸಂಬಂಧಿಸಿದಂತೆ ಪ್ರಕರಣಗಳ ತನಿಖೆಯನ್ನು ಕೈಗೊಳ್ಳಲು ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಡಿವೈಎಸ್ಪಿ/ಎಸಿಪಿ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿರುತ್ತದೆ.
7. ಠಾಣಾ ಸರಹದ್ದಿನಲ್ಲಿ ಬರುವಂತಹ ಕಂಪನಿಗಳು, ಶಾಲಾ ಕಾಲೇಜುಗಳು, ಅಪಾರ್ಟ್‌ಮೆಂಟ್ ಪಾರ್ಕ್ ಮತ್ತು ಮುಂತಾದ ಸ್ಥಳಗಳಲ್ಲಿ ಸೈಬರ್ ಕ್ರೈಂ ಬಗ್ಗೆ ಜಾಗೃತಿ ಕಾರ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.
8. ಟಿ ವಿ ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಡಿಜಿಟಲ್ ಅರೆಸ್ಟ್ ಬಗ್ಗೆ ಜಾಹಿರಾತು ನೀಡಲಾಗಿರುತ್ತದೆ.
9. ಡಿಜಿಟಲ್ ಅರೆಸ್ಟ್ ಮತ್ತು ಸೈಬರ್ ಅಪರಾಧ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ಪತ್ತೆ ಹಚ್ಚುವ ಸಂಬಂಧ ಸೈಬರ್ ಕಮಾಂಡರ್ ಯುನಿಟ್ ರಚನೆಯಾಗಿರುತ್ತದೆ.
10. ಬ್ಯಾಂಕ್‌ಗಳ ನೋಡಲ್ ಅಧಿಕಾರಿಗಳಿಗೆ ಮಾಸಿಕ ಸಭೆಗಳನ್ನು ತೆಗದುಕೊಂಡು ಸೈಬರ್ ಪ್ರಕರಣಗಳಲ್ಲಿ ಭಾಗಿಯಾಗುವ ಖಾತೆಗಳ ಮೇಲೆ ನಿಗಾವಹಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಸಿಸಿಯು ಘಟಕದಿಂದ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವಿಟರ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ನೀಡಲಾಗುತ್ತಿದೆ. ಶಾಲಾ ಕಾಲೇಜುಗಳಿಗೆ, ಇತರೆ ಸಂಸ್ಥೆಗಳಿಗೆ

1582ರ ಮು.ಉ SL.NO:-27 ದಿ:-11-03 2026

ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಸಾರ್ವಜನಿಕರುಗಳಿಗೆ ಡಿಜಿಟಲ್ ಅರೆಸ್ಟ್ ಹಾಗೂ ಇತರ ವಂಚನೆಗಳ ಬಗ್ಗೆ ಜಾಗೃತಿ ಮೂಡಿಸಲು ಜಾಗೃತಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

11. ಡಿಜಿಟಲ್ ಅರೆಸ್ಟ್ ಮತ್ತು ಸೈಬರ್ ಅಪರಾಧ ಪ್ರಕರಣಗಳಲ್ಲಿ ಆರೋಪಿಗಳ ಮೇಲೆ ಕಠಿಣ ಕಾನೂನು ಕ್ರಮಕ್ಕೈಗೊಳ್ಳಲು ಐಟಿ ಕಾಯ್ದೆ ಹಾಗೂ BNSನ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಲಾಗುತ್ತಿದೆ.

12. ಸೈಬರ್ ಅಪರಾಧ ಸಹಾಯವಾಣಿಗಳಿಗೆ "ಗೋಲ್ಡನ್ ಅವರ್" ನಲ್ಲಿ ಬರುವ ದೂರುಗಳನ್ನು ಸ್ವೀಕರಿಸಲು ಕರ್ನಾಟಕ ಪೊಲೀಸ್ ಇಲಾಖೆ 1930 ಹೆಲ್ಪ್‌ಲೈನ್ ಅನ್ನು ವೆಬ್‌ಬಾಟ್ ಸೌಲಭ್ಯದಿಂದ ಉನ್ನತೀಕರಿಸಿದೆ. ಇದರಿಂದ SMS ಮುಖಾಂತರ ಸ್ವಯಂ ಮಾಹಿತಿ ನೋಂದಣಿ ಮಾಡಿಕೊಳ್ಳಬಹುದಾಗಿರುತ್ತದೆ. ದೂರುಗಳನ್ನು "ಹಣಕಾಸು ಮತ್ತು ಹಣಕಾಸೇತರ" ಎಂದು ವಿಂಗಡಿಸುವ IVR ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಹೆಚ್ಚು ಕರೆಗಳು ಬಂದಾಗ ಆಟೋಮೇಟೆಡ್ ಕರೆ ವ್ಯವಸ್ಥೆ ಮೂಲಕ ಧ್ವನಿ ಮಾರ್ಗದರ್ಶನ ಸೌಲಭ್ಯವಿರುತ್ತದೆ. ದೂರುದಾರರು ತಮ್ಮ ದೂರಿನ ಸ್ಥಿತಿ ಹಂತವನ್ನು ತಿಳಿದುಕೊಳ್ಳಬಹುದಾಗಿರುತ್ತದೆ. 24/7 ಕಾಲ್ ಸೆಂಟರ್ ಕರ್ತವ್ಯ ನಿರ್ವಹಿಸುತ್ತಿರುತ್ತದೆ.

**ಕಡತ ಸಂಖ್ಯೆ:ಹೆಚ್‌ಡಿ 47 ಪಿಸಿಕೊ, 2026**

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು